# ಆಪರೇಷನ್ ಅಂಗಾರಕ

**ಮಂಗಳ!** ಹೆಸರೇ ಎಷ್ಟೊಂದು ಮೋಹಕವಾಗಿದೆ. ಹೆಸರಷ್ಟೇ ಅಲ್ಲ, ವಿಜ್ಞಾನಿಗಳ ಪಾಲಿಗೆ ಈ ಗ್ರಹದ ಬಗ್ಗೆ ತೀರದ ಆಕರ್ಷಣೆ. ಮಂಗಳ ಗ್ರಹದ ಕುರಿತು ಎಷ್ಟು ಅನ್ವೇಷಣೆ ನಡೆಸಿದರೂ ಬಾಹ್ಯಾಕಾಶ ವಿಜ್ಞಾನಿಗಳಿಗೆ ತೃಪ್ತಿಯೇ ಇಲ್ಲ.

ಮಂಗಳ ಗ್ರಹವನ್ನು ಅನ್ವೇಷಿಸುವ ಮನುಷ್ಯ ಪ್ರಯತ್ನಗಳನ್ನು ಒಮ್ಮೆ ಅವಲೋಕಿಸಿ ನೋಡಿದರೆ, ಆ ಗ್ರಹದ ಕುರಿತ ಮನುಕುಲದ ಕುತೂಹಲ ಅದೆಷ್ಟು ಗಾಢವಾದುದು ಎನ್ನುವುದು ಸ್ಪಷ್ಟವಾಗುತ್ತದೆ.ಕಳೆದ ಅರ್ಧ ಶತಮಾನದಲ್ಲಿ ಡಜನ್‌ಗಟ್ಟಲೆ ನೌಕೆಗಳು ಮಂಗಳ ಗ್ರಹದತ್ತ ತೆರಳಿ ಆ ಗ್ರಹದ ಅನ್ವೇಷಣೆಯನ್ನು ನಡೆಸಿವೆ. ಆ ಪೈಕಿ ಮೊದಲಿನ ಕೆಲವು ಮಂಗಳ ಗ್ರಹದ ಸಮೀಪದಲ್ಲಿ ಹಾದುಹೋದರೆ, ಮತ್ತೆ ಕೆಲವು ಅದರ ಕೃತಕ ಉಪಗ್ರಹಗಳಾಗುವ ಮೂಲಕ ಆ ಗ್ರಹವನ್ನು ಅಭ್ಯಸಿಸಿವೆ. ಇನ್ನೂ ಕೆಲವು ಮಂಗಳ ಗ್ರಹದ ಮೇಲಿಳಿದು ತಾವು ಕುಳಿತಲ್ಲಿಂದಲೇ ಅಲ್ಲಿನ ಮಣ್ಣನ್ನು ಅಗೆದು ತೆಗೆದು ವಿಶ್ಲೇಷಿಸಿವೆ. ಮತ್ತೆ ಕೆಲವು ರೊಬೋಟ್ ವಾಹನಗಳನ್ನು ಮಂಗಳ ಗ್ರಹದ ಮೇಲ್ಮೈಗೆ ಕೊಂಡೊಯ್ದು ಆ ಮೂಲಕ ಸುತ್ತಲಿನ ಪ್ರದೇಶದ ಅನ್ವೇಷಣೆಗೆ ಅನುವಾಗಿವೆ.

ಮಂಗಳ ಗ್ರಹದ ಮೇಲೆ ಮುಂದಿನ ವರ್ಷದ ಫೆಬ್ರುವರಿಯಲ್ಲಿ 'ಕುತೂಹಲದ ದಾಳಿ' ನಡೆಸುವ ಸಲುವಾಗಿ ಜುಲೈ 2020ರ ವೇಳೆಗೆ ಅಮೆರಿಕ ಸಂಯುಕ್ತ ಸಂಸ್ಥಾನ (ಯುಎಸ್‌ಎ), ಚೀನಾ ಮತ್ತು ಸಂಯುಕ್ತ ಅರಬ್ ಎಮಿರೇಟ್ಸ್ (ಯುಎಇ)– ಈ ಮೂರು ದೇಶಗಳೂ ಸಜ್ಜಾಗುತ್ತಿದ್ದವು. ಆ ಪೈಕಿ ಯುಎಇ ದೇಶದ 'ಅಲ್ ಅಮಾಲ್' (ಅರೇಬಿಕ್ ಭಾಷೆಯಲ್ಲಿ 'ಭರವಸೆ') ನೌಕೆಯನ್ನು ಜಪಾನಿನ 'ಎಚ್–2ಎ' ರಾಕೆಟ್ಟಿನಲ್ಲಿ ಜುಲೈ 20ರಂದು ಹಾಗೂ ಚೀನಾದ 'ಟಿಯನ್ ವೆನ್–1' ('ಸ್ವರ್ಗೀಯ ಪ್ರಶ್ನೆಗಳು') ನೌಕೆಯನ್ನು ಆ ದೇಶದ 'ಲಾಂಗ್ ಮಾರ್ಚ್–5' ರಾಕೆಟ್ಟಿನಲ್ಲಿ ಜುಲೈ 23ರಂದು ಉಡಾಯಿಸಲಾಯಿತು. ಇನ್ನುಳಿದ 'ಪರ್ಸಿವೆರೆನ್ಸ್' ('ಅವಿರತವಾದ ಯತ್ನ') ಎಂಬ ರೊಬೋಟ್ ವಾಹನವನ್ನುಳ್ಳ ನೌಕೆಯನ್ನು ಜುಲೈ 30ರಂದು ಅಮೆರಿಕ ತನ್ನ 'ಅಟ್ಲಾಸ್–5' ರಾಕೆಟ್ಟಿನಲ್ಲಿ ಯಶಸ್ವಿಯಾಗಿ ಉಡಾಯಿಸಿದೆ. ಮಂಗಳ ಗ್ರಹದ ಅನ್ವೇಷಣೆಗೆ ಸಂಬಂಧಿಸಿದಂತೆ ಮೂರು ದೇಶಗಳು ತಮ್ಮ ನೌಕೆಗಳನ್ನು ಬಹುಮಟ್ಟಿಗೆ ಏಕಕಾಲದಲ್ಲಿ ಹಾರಿಬಿಟ್ಟಿರುವುದು ಇದೇ ಮೊದಲು. ಬಾಹ್ಯಾಕಾಶ ಕ್ಷೇತ್ರದಲ್ಲಿ ಇದೊಂದು ವಿಶೇಷ ವಿದ್ಯಮಾನ.

## ಮಂಗಳನ ಆಕರ್ಷಣೆ

ಮಂಗಳ ಗ್ರಹವನ್ನು ಕಂಡರೆ ಮಾನವನಿಗೇಕಿಷ್ಟು ವ್ಯಾಮೋಹ? ಅದಕ್ಕೆ ಬಲವಾದ ಕಾರಣಗಳು ಇಲ್ಲದಿಲ್ಲ.

ನಮ್ಮ ಸೌರವ್ಯೂಹದ ಬೇರಾವುದೇ ಗ್ರಹಕ್ಕೆ ಹೋಲಿಸಿದಲ್ಲಿ ಮಂಗಳ ಗ್ರಹದ ಮೇಲಿನ ಪರಿಸರ ಭೂಮಿಯ ಮೇಲಿನ ಪರಿಸರಕ್ಕೆ ಸಾಕಷ್ಟು ಸಮೀಪವಾದುದಾಗಿದೆ. ಉದಾಹರಣೆಗೆ, ಭೂಮಿಯ ಸುಮಾರು ಅರ್ಧದಷ್ಟಿರುವ ಮಂಗಳ ಗ್ರಹದ ಮೇಲೂ ನಾವು ಭೂಮಿಯ ಮೇಲಿನಂತೆಯೇ ನಿಲ್ಲಬಹುದು. ಆದರೆ ಇಲ್ಲಿ 100 ಕಿಲೋಗ್ರಾಮ್ ತೂಗುವ ವ್ಯಕ್ತಿ ಅಲ್ಲಿ ಕೇವಲ 38 ಕಿಲೋಗ್ರಾಂ ತೂಗುತ್ತಾನೆಂಬುದು ಬೇರೆ ವಿಷಯ!

ಜೊತೆಗೇ ಅಲ್ಲಿನ ಸರಾಸರಿ ಮೇಲ್ಮೈ ಉಷ್ಣತೆ ಅಂಟಾರ್ಟಿಕಾದಕ್ಕಿಂತ ತಕ್ಕಮಟ್ಟಿಗೆ ಕಡಿಮೆಯಾಗಿರುತ್ತದೆ, ಅಷ್ಟೆ. ಇನ್ನೂ ಕುತೂಹಲಕರ ಸಂಗತಿಯೆಂದರೆ ಮಂಗಳ ಗ್ರಹದ ಮೇಲಿನ ಒಂದು ದಿನ (24



ಪ್ರಯೋಗಶಾಲೆಯಲ್ಲಿ ಪರೀಕ್ಷೆಯೊಂದಕ್ಕೆ ಒಳಪಡುತ್ತಿರುವ ಪರ್ಸಿವೆರೆನ್ಸ್ ವಾಹನ (ಚಿತ್ರಕೃಪೆ: ನಾಸಾ/ಜೆ ಪಿ ಎಲ್)